ನಿಷ್ಕ್ರಿಯವಾಗಿದೆ, ಅಲ್ಲಿ ಕೆಲಸ ನಡೆಯುತ್ತಿಲ್ಲ. ಹಾರ್ಬರ್ ಅಭಿವೃದ್ಧಿ ಬಗ್ಗೆ ಕಲ್ಲುಗಳನ್ನು ಹೊಡೆದು ಅನೇಕ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಇನ್ನೂ ಕೆಲಸ ಆಗಿಲ್ಲ. ಹಾಗೆಯೇ ಮೀನು ಒಣಗಿಸುವ ಯಾರ್ಡ್‌ನ್ನು ೧೯೯೧ನೇ ಇಸವಿಯಲ್ಲಿ ಮುಗಿಸಬೇಕೆಂಬ ಯೋಜನೆ ಇದ್ದರೂ ಆ ಯೋಜನೆ ಪ್ರಾರಂಭವಾಗಿ ಅರ್ಧಕ್ಕೆ ಹಾಗೆಯೇ ನಿಂತಿದೆ. ಕೆಲವು ತಿಂಗಳುಗಳ ಹಿಂದೆ ಸನ್ಮಾನ್ಯ ಮೀನುಗಾರಿಕೆ ಇಲಾಖೆಯ ಮಾನ್ಯ ಸಚಿವರು ನಮ್ಮ ತಾಲ್ಲೂಕಿಗೆ ಬಂದಿದ್ದಾಗ, ಪಾಪ ಅವರಿಗೆ ಇನ್ನೂ ಊಟ ಕೂಡ ಮಾಡಿರಲಿಲ್ಲ. ಆದರೂ ನಾನು ಒತ್ತಾಯ ಮಾಡಿ ಈ ಯೋಜನೆಗಳನ್ನು ತೋರಿಸಿದೆ. ಆಗ ಅಲ್ಲಿ ಸಹಸ್ರಾರು ಮೀನುಗಾರರು ಇದ್ದರು. ಆ ಕೆಲಸಗಳನ್ನು ಕೂಡಲೇ ಮಾಡಿಸಿಕೊಡುತ್ತೇನೆಂದು ಮಾನ್ಯ ಮಂತ್ರಿಯವರು ವಾಗ್ದಾನ ಕೊಟ್ಟು ಬಂದಿದ್ದಾರೆ. ಆದರೆ ಇಲ್ಲಿ ಕೊಟ್ಟಿರುವ ಉತ್ತರಕ್ಕೂ ಮತ್ತು ಮಾನ್ಯ ಸಚಿವರು ನೋಡಿದ್ದಕ್ಕೂ ಸಂಪೂರ್ಣ ವಿರೋಧಾಭಾಸ ಇದೆ, ಮಾನ್ಯ ಮಂತ್ರಿಗಳೇ ಇದನ್ನು ಸ್ವತಃ ಕಣ್ಣಿನಿಂದ ನೋಡಿದ್ದರಿಂದ ಯಾವಾಗ ಈ ಕೆಲಸಗಳನ್ನು ಮಾಡಿಸುತ್ತಾರೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಯಾವ ತರಹ ಇದೆಯೋ ಅದೇ ತರಹ ಉತ್ತರವನ್ನು ಕೊಡಲಾಗಿದೆ. ನನ್ನ ಇಲಾಖೆಯಿಂದ ಯಾವುದೇ ರೀತಿಯಲ್ಲಿ ಆಚಾತುರ್ಯವಾದ ಉತ್ತರವನ್ನು ಕೊಟ್ಟಿಲ್ಲ ಈಗ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಆ ಬಗ್ಗೆ ಹೇಳಬೇಕೆಂದರೆ, ನಾನು ಈ ಇಲಾಖೆಯನ್ನು ವಹಿಸಿಕೊಂಡಮೇಲೆ ತಕ್ಷಣ ಆ ಜಿಲ್ಲೆಯಲ್ಲಿ ಪ್ರವಾಸ ಮಾಡಿದ್ದೇನೆ ನಾನು ಪ್ರವಾಸ ಮಾಡುವ ಕಾಲದಲ್ಲಿ ಅವರ ಕ್ಷೇತ್ರಕ್ಕೂ ಹೋಗಿ ಬಂದಿದ್ದೇನೆ. ಶಿರೂರಿನಲ್ಲಿ ಯಾವ ಬಂದರೂ ಇಲ್ಲ, ಆದರೆ ಮೀನುಗಾರರ ಅನುಕೂಲಕ್ಕಾಗಿ ಮಾಡಲಾಗಿದ್ದ ಕೆಲವು ಯೋಜನೆಗಳ ಕೆಲಸಗಳು ತೃಪ್ತಿಕರವಾಗಿ ಆಗಿಲ್ಲವೆಂದು ನನ್ನ ಮನಸ್ಸಿಗೆ ಬಂದಿದೆ. ಅಲ್ಲಿ ಕೆಲವು ಯೋಜನೆಗಳನ್ನು ೧೯೯೦-೯೧ರೊಳಗೆ ೨ ಲಕ್ಷದ ೨೦ ಸಾವಿರ ರೂಗಳ ವೆಚ್ಚದಲ್ಲಿ ಮುಗಿಸಬೇಕೆಂದು ತೀರ್ಮಾನವಾಗಿದೆ. ಆದರಲ್ಲಿ ೧೦ ಟನ್ ಮಂಜುಗಡ್ಡೆ ತಯಾರು ಮಾಡುವ ಫ್ಯಾಕ್ಟರಿ. ಸಮಾಜಭವನ, ಸಂಪರ್ಕ ರಸ್ತೆ ಕೆಲಸಗಳು ಮೀನು ಒಣಗಿಸುವ ಯಾರ್ಡ್. ಇವರೆಲ್ಲ ಮೂರು ಕೆಲಸಗಳನ್ನು ಪೂರ್ಣಗೊಳಿಸಿದ್ದೇವೆ. ಮೀನು ಒಣಗಿಸುವ ಯಾರ್ಡ್ ಬಗ್ಗೆ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳುವ ಸಂಬಂಧದಲ್ಲಿ ಕಾನೂನಿನ ತೊಡಕಾಗಿದ್ದರಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ ಈಗ ಜಮೀನನ್ನು ಅಕ್ವಿಸಿಷನ್ ಮಾಡಿಕೊಳ್ಳುವ ಬಗ್ಗೆ ಇದ್ದ ಸ್ಟೇಯನ್ನು ತೆರವು ಮಾಡಿಸಿರುವುದರಿಂದ ಇನ್ನು ಮುಂದೆ ಕೆಲಸ ಮಾಡುವುದಕ್ಕೆ ಸುಲಲಿತವಾಗುತ್ತದೆ. ೧೯೯೦-೯೧ರಲ್ಲಿ ಈ ಕೆಲಸಗಳನ್ನು ಪೂರ್ಣಗೊಳಿಸುವುದಕ್ಕೆ ಹಾಗೂ ಮೀನುಗಾರರಿಗೆ ಅನುಕೂಲ ಒದಗಿಸುವುದಕ್ಕೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ ಎನ್ನುವ ಭರವಸೆಯನ್ನು ತಮ್ಮ ಮುಖಾಂತರ ಕೊಡುತ್ತಿದ್ದೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿಯಲ್ಲಿ ಆಂಗ್ಲ ಮಾಧ್ಯಮ ಶಾಲೆ

೫೬೭. ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ).—ಮಾನ್ಯ ಶಿಕ್ಷಣ ಯುವಜನ ಸೇವೆ, ವ್ಯವಹಾರಗಳು ಕ್ರೀಡೆಗಳು. ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರಿ ತಾಲ್ಲೂಕಿನ ಕಿನ್ನಿಗೋಳಿಯಲ್ಲಿ ಅನಧಿಕೃತವಾಗಿ ಆಂಗ್ಲ ಮಾಧ್ಯಮ ಶಾಲೆ ಕಳೆದ ಮೂರು ವರ್ಷಗಳಿಂದ ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಶಾಲೆಗೆ ಸರ್ಕಾರವು ಮಂಜೂರಾತಿ ಕೊಡಲು ಕ್ರಮಕೈಗೊಳ್ಳುವುದೆ ?

ಇ) ಇಲ್ಲವಿದ್ದಲ್ಲಿ, ಈ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಆಗುವ ತೊಂದರೆ ತಪ್ಪಿಸಲು ಸರ್ಕಾರವು ಏನು ಕ್ರಮ ಕೈಗೊಳ್ಳುವುದು ?

ಶ್ರೀ ಕೆ. ಜೆಡ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ಮಾನ್ಯತೆಯ ಶಾಲೆಗಳಿಗೆ ತಮ್ಮದಾದ ಪಠ್ಯಕ್ರಮ ನಿಯಮಗಳನ್ನು ಪೂರೈಸಿಲ್ಲದ ಕಾರಣ ಶಾಲೆ ನಡೆಸಲು ಅನುಮತಿಯನ್ನು ತಿರಸ್ಕರಿಸಲಾಗಿದೆ.

೫) ಇಂತಹ ಅನಧಿಕೃತ ಶಾಲೆಗಳ ಮಕ್ಕಳನ್ನು ಅಧಿಕೃತ ಶಾಲೆಗಳಿಗೆ ಸೇರಿಸುವ ಬಗ್ಗೆ ಸೂಕ್ತ ತಿಳುವಳಿಕೆಯನ್ನು ಸಂಬಂಧಪಟ್ಟ ಉಪನಿರ್ದೇಶಕರಿಗೆ ನೀಡಲಾಗಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ.—ಮಾನ್ಯ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಭಾಷೆ ಮತ್ತು ಕೊಂಕಣಿ ಭಾಷೆ ಮಾತನಾಡುವಂಥ ಜನಗಳು ಇದ್ದಾರೆ, ನಮ್ಮ ಜಿಲ್ಲೆಯ ಬಹುತೇಕ ಜನರು ಪರದೇಶಗಳಿಗೆ ಹೋಗಿ ಅಲ್ಲಿ ತಮ್ಮ ಜೀವನವನ್ನು ಸುಗಮಗೊಳಿಸಿಕೊಂಡು ಕೊನೆಯ ಕಾಲ ಗಳಲ್ಲಿ ತಮ್ಮ ಮಕ್ಕಳುಗಳೊಡನೆ ನಮ್ಮ ರಾಷ್ಟ್ರದಲ್ಲಿ ಎರಡನೇ ಸ್ಥಾನವನ್ನು ಪಡೆದಿರತಕ್ಕಂಥ ಮತ್ತು ಒಳ್ಳೆ ಸಂಪತ್ತು ಗಳಿಸಿರುವಂಥ ಈ ಊರಿನಲ್ಲಿ ವಾಸ ಮಾಡುವುದಕ್ಕೆ ಬರುತ್ತಾರೆ. ಬಹು ಭಾಷೆ ಕಲಿಯುವಂಥ ಸಂದರ್ಭಗಳು ಬೇಕೆಂದು ಈಗಾಗಲೇ ಹೋರಾಟ ಮಾಡುತ್ತಿರುವ ಸಮಯದಲ್ಲಿ ನನ್ನ ಕ್ಷೇತ್ರದಲ್ಲಿ ಒಂದು ಆಂಗ್ಲ ಭಾಷೆ ಶಾಲೆಗೆ ಅನುಮತಿ ಸಿಗದೆ ಆ ಶಾಲೆಯಲ್ಲಿ ಈಗಾಗಲೇ ಓದುತ್ತಿರುವ ಮಕ್ಕಳ ಸ್ಥಿತಿ ಡೋಲಾಯಮಾನವಾಗಿದೆ. ಆದ್ದರಿಂದ ಸರ್ಕಾರವು ತನ್ನ ವಿದ್ಯಾ ಧೋರಣೆಯನ್ನು ಸ್ವಲ್ಪ ಬದಲಾವಣೆ ಮಾಡಿ ಈಗಾಗಲೇ ಪ್ರಾರಂಭ ಮಾಡಿ ಸಿನೇ ತರಗತಿಯವರೆಗೆ ತರಗತಿಗಳನ್ನು ನಡೆಸುತ್ತಿರುವ ಈ ಶಾಲೆಗೆ ಒಂದು ಅನುಮತಿ ಕೊಟ್ಟು ಅಲ್ಲಿ ಓದುತ್ತಿರುವ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಬರದ ರೀತಿಯಲ್ಲಿ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಈ ಸದನ ದಲ್ಲಿ ಮಾನ್ಯ ವಿದ್ಯಾ ಸಚಿವರನ್ನು ವಿನಂತಿಸಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ನಮ್ಮ ಜಿಲ್ಲೆಯಲ್ಲಿ ತುಳು ಭಾಷೆ, ಕೊಂಕಣಿ ಭಾಷೆ ಮಾತನಾಡುವವರು ಹೆಚ್ಚಾಗಿರುವುದರಿಂದ ಇಂಗ್ಲೀಷ್ ಶಾಲೆಗೆ ಅನುಮತಿ ಕೊಡಬೇಕು. ಈ ಬಗ್ಗೆ ಬೇರೆ ದೃಷ್ಟಿಯಿಂದ ನೋಡಬಾರದು. ನಾವು ಸಹ ಕನ್ನಡ ಅಭಿಮಾನಿಗಳೇ. ನಮ್ಮ ಜಿಲ್ಲೆಯಲ್ಲೂ ಕನ್ನಡ ಸಾಹಿತಿಗಳು ಹುಟ್ಟಿದ್ದಾರೆ. ಇಂಗ್ಲೀಷ್ ಪುಸ್ತಕಗಳನ್ನು ಬರೆದವರಿದ್ದಾರೆ. ತುಳು ಸಾಹಿತ್ಯ ವನ್ನು ರಚಿಸಿದವರು ಇದ್ದಾರೆ. ಕೊಂಕಣಿ ಭಾಷೆಗೆ ನಮ್ಮದು ಹೆಸರಾಂತ ಊರಾಗಿದೆ. ಹಾಗಿರುವಾಗ ನಮಗೆ ಕನ್ನಡದ ಮೇಲೆ ಯಾವುದೇ ತರಹದ ದ್ವೇಷ ಇಲ್ಲ. ನಮಗೆ ಕನ್ನಡದ ಮೇಲೆ ತುಂಬಾ ಪ್ರೀತಿ ಉಂಟು. ಅನೇಕ ಕನ್ನಡ ಸಾಹಿತಿಗಳನ್ನು ನಾವು ಕರ್ನಾಟಕ್ಕೆ ಕೊಟ್ಟಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್.—ತಾವು ಕನ್ನಡ ಶಾಲೆಗೆ ಅಥವಾ ತುಳು ಶಾಲೆಗೆ ಅನುಮತಿ ಕೊಡಿ ಎಂದು ಕೇಳಿಲ್ಲ. ತಾವುಗಳು ಇಂಗ್ಲೀಷ್ ಶಾಲೆಗೆ ಅನುಮತಿಯನ್ನು ಕೇಳಿದ್ದರಿಂದ ಆ ಬಗ್ಗೆ ತಡವಾಗಿರ ಬಹುದು. ತಾವುಗಳು ತುಳು ಅಥವಾ ಕನ್ನಡ ಶಾಲೆಗಳಿಗಾಗಿ ಅನುಮತಿಯನ್ನು ಕೇಳುತ್ತಿದ್ದರೆ ಅದಕ್ಕೆ ತಡವಾಗುತ್ತಿರಲಿಲ್ಲ. ೧೯೮೯ನೇ ಆಗಸ್ಟ್ ತಿಳಿನೇ ತಾರೀಖಿಗೆ ಅನುಗುಣವಾಗಿ ಪ್ರಾಥಮಿಕ ಶಾಲೆಗಳ ಅನುದಾನ ಸಂಹಿತೆಯು ನಿಯಮಗಳನ್ನು ಪೂರೈಸಿಲ್ಲದ ಕಾರಣ ಶಾಲೆ ನಡೆಸಲು ಅನುಮತಿ ಯನ್ನು ನಿರಾಕರಣೆ ಮಾಡಿದೆ. ಇಂಗ್ಲೀಷ್ ಶಾಲೆಗಳಿಗೆ ಅನುಮತಿಯನ್ನು ಕೊಡುವುದರ ಬಗ್ಗೆ ಇನ್ನೂ ಸರಕಾರ ನಿರ್ಣಯ ತೆಗೆದುಕೊಂಡಿಲ್ಲ ಈ ಬಗ್ಗೆ ಒಂದು ವಾರದೊಳಗಾಗಿ ನಿರ್ಣಯ ತೆಗೆದುಕೊಳ್ಳುವ ವರಿದ್ದು ಆ ಸಂದರ್ಭದಲ್ಲಿ ತಮ್ಮ ವಿಚಾರವನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಸೋಮಪ್ಪ ಸುವರ್ಣ.—ತಮಗೆ ಧನ್ಯವಾದಗಳು

ಅಧ್ಯಕ್ಷರು.—ಅವರು ತಮಗೆ ಧನ್ಯವಾದಗಳನ್ನು ಹೇಳಿದರು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಶಿಕ್ಷಣ ಸಚಿವರಲ್ಲಿ ಕೇಳಿ ಕೊಳ್ಳುವುದೇನೆಂದರೆ, ಇಂಥ ಅನಧಿಕೃತ ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ಬೆಂಗಳೂರು. ಮೈಸೂರು, ಹುಬ್ಬಳ್ಳಿ-ಧಾರವಾಡ ಮುಂತಾದ ಕಡೆಗಳಲ್ಲಿ ಬಹಳಷ್ಟು ಪ್ರಾರಂಭ ಮಾಡಿದ್ದಾರೆ. ಇದರಿಂದಾಗಿ ಸಾರ್ವಜನಿಕರಿಗೆ ಬಹಳಷ್ಟು ತೊಂದರೆಯಾಗಿದೆ. ಇಂಥ ಶಾಲೆಗಳವರು ಸಾರ್ವಜನಿಕರಿಂದ ಬಹಳಷ್ಟು ಹಣವನ್ನು ಕೂಡ ಸಂಗ್ರಹಿಸುತ್ತಾ ಇದ್ದಾರೆ. ಇತ್ತೀಚೆಗೆ ತಮ್ಮ ಇಲಾಖೆಯವರು ಇಂಥ ಕಡೆಗಳಲ್ಲಿ ಇಂತಿಂಥ ಶಾಲೆಗಳು ಅನಧಿಕೃತ ಎಂದು ಪತ್ರಿಕೆಗಳಲ್ಲಿ ಸಾರ್ವಜನಿಕರ ಅವಗಾಹನೆಗಾಗಿ ಕೊಟ್ಟಿರಂತಾರೆ. ಆದರೆ ಅದಕ್ಕೆ ಮೊದಲೇ ಹಣ ಸಂಗ್ರಹ ಮಾಡಿರುತ್ತಾರೆ. ಇದು ಕೇವಲ ತಮ್ಮ ಆಡಳಿತದ ಕಾಲದಲ್ಲಿ ನಡೆದಿದೆ ಎಂದು ಹೇಳುತ್ತಾ ಇಲ್ಲ, ನಮ್ಮ ಆಡಳಿತದ ಕಾಲದಲ್ಲಿಯೂ ಇಂಥ ಪ್ರಕರಣಗಳು ನಡೆದಿವೆ.

ಅಧ್ಯಕ್ಷರು.—ಇನ್ನು ಮೇಲೆ ತಾವು ಯಾವ ಪ್ರಶ್ನೆ ಹಾಕಿದರೂ ಅಲ್ಲಿಂದಲೇ ಪ್ರಾರಂಭ ಮಾಡಿ...

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಅಲ್ಲಿಂದಲೇ ಪ್ರಾರಂಭ ಮಾಡಬೇಕಾಗಿದೆ. ಹೀಗೆ ಇಂಗ್ಲೀಷ್ ಮಾಧ್ಯಮದ ಅನಧಿಕೃತ ಶಾಲೆಗಳನ್ನು ಯಾರು ತಕ್ಷಣ ಪ್ರಾರಂಭ ಮಾಡುತ್ತಾರೆ. ಈ ಬಗ್ಗೆ ಇನ ಮುಂದಾದರೂ ಇಂಥ ಶಾಲೆಗಳು ಹುಟ್ಟಿಕೊಳ್ಳುವ ಹಾಗೆ ಸರಕಾರದವರು ಕೂಡಲೇ ಕ್ರಮ ತೆಗೆದು ಕೊಳ್ಳುವುದಕ್ಕೆ ಆಲೋಚನೆ ಮಾಡುವುದು ಒಳ್ಳೆಯದು ಎಂದು ಹೇಳಬಯಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಇಂಗ್ಲೀಷ್ ಶಾಲೆಗಳ ಬಗ್ಗೆ ದೊಡ್ಡದೊಂದು ಚರಿತ್ರೆ ಇದ್ದ ಹಾಗೆ ಕಾಣುತ್ತದೆ. ಇನ್ನು ಮುಂದೆ ಇಂಥ ಆನಧಿಕೃತ ಇಂಗ್ಲೀಷ್ ಶಾಲೆಗಳು ಆಗದ ಹಾಗೆ ನೋಡಿ ನೋಡಿಕೊಳ್ಳುತ್ತೇವೆ. ಪುಕ್ಕೃತ ನಾಲ್ಕಾರು ವರ್ಷಗಳಿಂದ ಅನುಮತಿಗಾಗಿ ಅರ್ಜಿ ಹಾಕಿ ಕೊಂಡು ಅನುಮತಿಗಾಗಿ ಕಾಯುತ್ತಾ ಇರುವವರಿದ್ದಾರೆ. ಇಲಾಖೆಯವರು ಇದನ್ನು ನೋಡಿದರೂ ನೋಡದೇ ಇರುವ ಹಾಗೆ ನಡೆದುಕೊಂಡು, ಸೂಕ್ತವಾಗಿ ಇಂಥವರಿಗೆ ಅನುಮತಿ ನೀಡಬೇಕೋ ಬೇಡವೋ ಎಂಬುದನ್ನು ತೀರ್ಮಾನಿಸದೆ, ಅವರಿಗೆ ಒಂದು ನಿರ್ದಿಷ್ಟ ರೀತಿಯಲ್ಲಿ ಹೇಳದೇ ಇರುವುದರಿಂದ ಅವರಿಗೆ ಸಂದಿಗ್ಧತೆ ಉಂಟಾಗಿತ್ತು. ಆದರೆ ಇಲಾಖೆಯಲ್ಲಿ ಅದು ಅನ್ ಆಥರೈಸ್ಡ್ ಸ್ಕೂಲ್ ಎಂದು ಇತ್ತು. ಹೀಗೆ ಇಲಾಖೆಯವರು ಗಮನಿಸಿಕೊಂಡು ಬಂದು ವರ್ಷಗಟ್ಟಲೆ ಸುಮ್ಮನಿದ್ದು ಈಗ ಅನ್ ಆಥರೈಸ್ಡ್ ಎಂದರೆ ಹೇಗೆ ಎಂಬುದನ್ನು ನೋಡಬೇಕಾಗುತ್ತದೆ. ಇಂಥ ಹತ್ತಾರು ಸಮಸ್ಯೆಗಳು ಈ ಕಾರಿತು ಇವೆ. ಈ ಬಗ್ಗೆ ಸರಕಾರ ಏನು ಕ್ರಮ ತೆಗೆದುಕೊಳ್ಳಬೇಕೆಂದು ವಿಚಾರ ಮಾಡುತ್ತಾ ಇದ್ದೇವೆ. ಇನ್ನು ಒಂದು ವಾರದೊಳಗಾಗಿ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ. ಹಾಗೆಯೇ ರೆಕಗ್ನಿಷನ್ ರಿಂದ ಹೀಗೆ ಯಾರು ಶಾಲೆಗಳನ್ನು ಅನಧಿಕೃತವಾಗಿ ಪ್ರಾರಂಭ ಮಾಡುತ್ತಾರೆ ಕಾನೂನು ರೀತ್ಯಾ ಸಮಯಮಿತಿಗಳನ್ನು ಅನುಸರಿಸದೆ ಅರ್ಜಿ ಹಾಕದೆ ಪ್ರಾರಂಭ ಮಾಡುತ್ತಾರೆ, ಅವರಿಗೆ ಯಾವುದೇ ರೀತಿಯ ಅವಕಾಶಗಳನ್ನು ಕಲ್ಪಿಸಿಕೊಡುವುದಿಲ್ಲ. ಅಷ್ಟೆ ಅಲ್ಲ ಇಂಥ ಶಾಲೆಗಳು ಹುಟ್ಟಿಕೊಳ್ಳದಂತೆ ಯಾವ ಅಧಿಕಾರಿ ನಿಗಾ ವಹಿಸ ಬೇಕೋ ಅವನು ಸರಿಯಾಗಿ ಕಾರ್ಯನಿರ್ವಹಿಸದಿದ್ದರೆ ಅವರ ಮೇಲೆ ಉಗ್ರಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

SHRI QAMARUL ISLAM.—Whether this policy is for the minority schools also ?

SHRI K. H. RANGANATH.—Let the Hon. Member put another question.

ಶ್ರೀ ವಾಟಾಳ್ ನಾಗರಾಜ್.—ಇಂಗ್ಲೀಷ್ ಶಾಲೆಗಳನ್ನು ಪ್ರಾರಂಭ ಮಾಡುವವರಿಗೆ ಅನುಮತಿ ಕೊಡದಿರುವ ಬಗ್ಗೆ ಒಂದು ನಿರ್ದಿಷ್ಟ ನೀತಿ ಸರ್ಕಾರದಲ್ಲಿರಬೇಕು. ಈಗ ಕನ್ನಡ ಶಾಲೆಗಳಿಗೆ ಅನುಮತಿ ಕೊಡತಕ್ಕಂಥಾದ್ದರ ಬಗ್ಗೆ ಸರಕಾರದ ಒಂದು ನೀತಿಯು ಈಗಾಗಲೇ ಇದೆ. ಸರಕಾರದ ನೀತಿ ಕನ್ನಡ ಮಾಧ್ಯಮದ ಶಾಲೆಗಳಿಗೆ ಪ್ರೋತ್ಸಾಹ ಕೊಡುವಂಥಾದ್ದು. ಆಗಿರುವಾಗ ನಾಯಿಕೊಡೆಗಳಂತೆ ಹುಟ್ಟಿಕೊಳ್ಳುತ್ತಿರುವ, ಬೆಳೆಯುತ್ತಿರುವ ಈ ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಅನುಮತಿ ಕೊಡುವುದನ್ನು ಸರಕಾರದವರು ನಿಲ್ಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಇಂಗ್ಲೀಷ್ ಮಾಧ್ಯಮದ ಶಾಲೆಗಳನ್ನು ಸಂಪೂರ್ಣವಾಗಿ ನಿಲ್ಲಿಸತಕ್ಕಂಥಾದ್ದು ಸರಿಯಲ್ಲ. ರಾಷ್ಟ್ರಮಟ್ಟದ ಶಿಕ್ಷಣದಲ್ಲಿ ನಾವು ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿದ್ದೇವೆ ನಾವು ಒಪ್ಪಿಕೊಂಡ ಹಾಗೆ ಅದನ್ನು ಜಾರಿಗೆ ಕೊಡಬೇಕಾಗುತ್ತದೆ. ಆದರೆ ಇವೊತ್ತು ಪರಿಸ್ಥಿತಿ ಏನಾಗಿದೆ ಅಂದರೆ ನಮ್ಮ ಮಕ್ಕಳು ಕನ್ನಡವನ್ನೂ ಸರಿಯಾಗಿ ಕಲಿಯುತ್ತಿಲ್ಲ, ಇಂಗ್ಲೀಷ್‌ನ್ನೂ ಸರಿಯಾಗಿ ಕಲಿಯುತ್ತಾ ಇಲ್ಲ. ಎಲ್ಲಿ ನಮಗೆಲ್ಲಾ ಹಿಂದೆ ಇಂಗ್ಲೀಷ್‌ನ್ನು ಕಡ್ಡಾಯವಾಗಿ ಹೇಳಿಕೊಟ್ಟರು, ಆದರ ಒಂದು ಪರಿಣಾಮದಿಂದಾಗಿ ನಾವೆಲ್ಲರೂ ಕನ್ನಡ ಮಾಧ್ಯಮದಲ್ಲಿ ಕಲಿತಿದ್ದರೂ ಇಂಗ್ಲೀಷ್‌ನ್ನು ಚೆನ್ನಾಗಿ ಕಲಿತುಕೊಂಡಿದ್ದೇವೆ. ಇಂಗ್ಲೀಷ್ ಮಾಧ್ಯಮದಲ್ಲಿಯೇ ಕಲಿಯಬೇಕೆಂದು ಏನೂ ಇಲ್ಲ ಕಲಿಯುವುದನ್ನು ಸರಿಯಾಗಿ ಕಲಿಸುವ ವ್ಯವಸ್ಥೆ ಇರಬೇಕು. ಇಂತಹ ಒಂದು ಬೋಧನಾ ಕಾರ್ಯಕ್ರಮ ತಪ್ಪಾಗಿ ಮಾಡಿದ್ದರಿಂದಾಗಿ ಮತ್ತು ಹತ್ತಾರು ವರ್ಷಗಳಿಂದ ಈ ಬಗ್ಗೆ ನಾವು ಗಮನ ಕೊಡದಿದ್ದರಿಂದ ಇದೂ ಹೀಗೆ ನಡೆದುಕೊಂಡು ಬಂದಿದೆ ನಮ್ಮಲ್ಲಿ ಎಸ್‌ಎಸ್‌ಎಲ್‌ಸಿ ಮಾಡಿ ಟಿಸಿಹೆಚ್ ಮಾಡಿಕೊಂಡ ಒಬ್ಬರಿಗೆ ಇಂಗ್ಲೀಷ್ ಕನ್ನಡ ಎರಡನ್ನೂ ಬೋಧಿಸುವ ಪರಿಪಾಠ ಇಟ್ಟುಕೊಂಡು ಬಂದಿದ್ದೇವೆ. ಆ ಅಧ್ಯಾಪಕ ಎಷ್ಟರವಟ್ಟಿಗೆ ಇಂಗ್ಲೀಷ್‌ನ್ನು ಹೇಳಿ ಬಲ್ಲ ಎಂಬುದನ್ನು ಯಾರೂ ನೋಡಿಲ್ಲ. ಹೀಗಾಗಿ ಕನ್ನಡ ಶಾಲೆಗಳಲ್ಲಿ ಇಂಗ್ಲೀಷ್ ಕಲಿಕೆಯು ಮಟ್ಟಿ ಕಡಿಮೆಯಾಗಿರಬಹುದು. ಹೀಗಾಗಿ ನಮ್ಮ ಮಕ್ಕಳಿಗೆ ಭಾಷೆಯ ಮೇಲೆ ಪ್ರಭುತ್ವ ಇಲ್ಲದ ಕಾರಣ ಹಾದಿ ತಾಯಿಂಗಳು ಇಂಗ್ಲೀಷ್ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಿದರೆ ಅಲ್ಲಿ ಇಂಗ್ಲೀಷ್‌ನ್ನು ಚೆನ್ನಾಗಿ ಕಲಿಯಬಹುದೆಂದು ಶಿಕ್ಷಿದು ಅಲ್ಲಿಗೆ ಸೇರಿಸುವ ಒಂದು ಪ್ರವೃತ್ತಿ ಬಂದಿದೆ. ಇಂಥ ಒಂದು ಪ್ರವೃತ್ತಿಯನ್ನು ಬಿಡಿಸ ಬೇಕಾಗಿದೆ. ಆ ಬಗ್ಗೆ ನಾವು ಪ್ರಯತ್ನ ಪಡುತ್ತಿದ್ದೇವೆ ಮತ್ತು ಅದನ್ನು ಬಿಟ್ಟು ಇಂಗ್ಲೀಷ್‌ನ್ನು ಬ್ಯಾನ್ ಮಾಡತಕ್ಕಂಥ ನೀತಿಯನ್ನು ಸರಕಾರವು ಒಪ್ಪಿಕೊಂಡಿಲ್ಲ ಮತ್ತು ಅದು ಸಾಧ್ಯವೂ ಆಗುವುದಿಲ್ಲ.